**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.**

**ಸಿಸಿ ನಂ.439/2024**

**ಚಾಸಾ-1/ಪಿಡಬ್ಲೂ-1**

| | |
|---|---|
| **ಹೆಸರು** | ಗಜಾನಂದ |
| **ತಂದೆ ಹೆಸರು** | ಮದಗೊಂಡ |
| **ವಯಸ್ಸು** | 32 ವರ್ಷಗಳು |
| **ಉದ್ಯೋಗ** | ಪಿ ಎಸ್ ಐ |
| **ವಾಸ ಸ್ಥಳ** | ಜೇವರ್ಗಿ |

**ದಿನಾಂಕ 24.02.2026 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

ದಿನಾಂಕ 01.02.2024 ರಿಂದ 17.06.2024 ರವರೆಗೆ ನೆಲೋಗಿ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 08.03.2024 ರಂದು ಸಾಯಂಕಾಲ 6.30 ಗಂಟೆಗೆ ನಾನು, ಚಾಸಾ-1, 4, 5 ರವರು ಠಾಣೆಯಲ್ಲಿದ್ದಾಗ ಇಟಗಾ ಗ್ರಾಮದ ಭೀಮಾ ನದಿಯಿಂದ ಟ್ರ್ಯಾಕ್ಟರನಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿದ್ದಾರೆಂದು ಬಾತ್ಮಿ ಬಂದರ ಮೇರೆಗೆ ಸದರಿ ಮಾಹಿತಿಯನ್ನು ಚಾಸಾ-4 ಮತ್ತು 5 ರವರಿಗೆ ತಿಳಿಸಿ ದಾಳಿ ಮಾಡಬೇಕೆಂದು ತಿಳಿಸಿರುತ್ತೇನೆ. ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಕರೆದುಕೊಂಡು ದಾಳಿ ವಿಚಾರ ತಿಳಿಸಲಾಯಿತು. ನಂತರ ನಾವೆಲ್ಲರೂ ಸೇರಿ ಸಾಯಂಕಾಲ 6.45 ಗಂಟೆಗೆ ಇಲಾಖೆ ವಾಹನದಲ್ಲಿ ಹೊರಟು ಘಟನಾ ಸ್ಥಳಕ್ಕೆ ರಾತ್ರಿ 7.30 ಗಂಟೆಗೆ ಹೋದಾಗ ಇಟಗಾ ಗ್ರಾಮದ ಕಮಾನ ಹತ್ತಿರ ಒಂದು ಟ್ರ್ಯಾಕ್ಟರ ಬರತಿತ್ತು. ಸದರಿ ಟ್ರ್ಯಾಕ್ಟರನ್ನು ನಾವು ನಿಲ್ಲಿಸುವಷ್ಟರಲ್ಲಿ ಟ್ರ್ಯಾಕ್ಟರ ಚಾಲಕನು ನಮ್ಮನ್ನು ನೋಡಿ ಟ್ರ್ಯಾಕ್ಟರನ್ನು ಅಲ್ಲೇ ಬಿಟ್ಟು ಹೋದನು. ನಂತರ ಚಾಸಾ-2 ಮತ್ತು 3 ರವರ ಸಮಕ್ಷಮ ಟ್ರ್ಯಾಕ್ಟರನ್ನು ಪರಿಶೀಲಿಸಲಾಗಿ ಅದು ಸ್ವರಾಜ ಕಂಪನಿಯ ಟ್ರ್ಯಾಕ್ಟರ ನಂ.ಕೆಎ-32/ಟಿಬಿ-2303 ಮತ್ತು ಒಂದು ನೀಲಿ ಬಣ್ಣದ ಟ್ರಾಲಿ ಇದ್ದು ಅದಕ್ಕೆ ಯಾವುದೆ ನಂಬರ ಇರಲಿಲ್ಲ. ನಂತರ ಟ್ರಾಲಿ ಪರಿಶೀಲಿಸಲಾಗಿ ಮರಳು ತುಂಬಿತ್ತು. ಮರಳಿನ ಅಂದಾಜು ಕಿಮತ್ತು ರೂ.3000/- ಇತ್ತು. ಪಂಚನಾಮೆಯನ್ನು ರಾತ್ರಿ 7.30 ರಿಂದ 8.30 ರವರೆಗೆ ಪಂಚರ ಸಮಕ್ಷಮ ಜರುಗಿಸಲಾಯಿತು. ರಾತ್ರಿ ಆಗಿದ್ದರಿಂದ ಮತ್ತು ಯಾವುದೆ ಚಾಲಕರು ಸಿಗದ ಕಾರಣ ದೇವಲಗಾಣಗಾಪೂರ ಠಾಣೆ ಆವರಣದಲ್ಲಿ ನಿಲ್ಲಿಸಿರುತ್ತೇನೆ. ನಂತರ ರಾತ್ರಿ 10.10 ಕ್ಕೆ ಮರುಳು ಜಪ್ತಿ ಪಂಚನಾಮೆಯೊಂದಿಗೆ ಠಾಣೆಗೆ ಬಂದು ಠಾಣಾಧಿಕಾರಿಗೆ ವರದಿಯೊಂದಿಗೆ ವಶಕ್ಕೆ ನೀಡಿರುತ್ತಾರೆ. ಆರೋಪಿತನು ಯಾವುದೆ ಪರವಾನಿಗೆ ಇಲ್ಲದೆ ರಾಯಲ್ಟಿ ತುಂಬದೆ ಮರಳು ಸಾಗಾಟ ಮಾಡಿರುತ್ತಾನೆ.

ಈಗ ನಾನು ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ವರದಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ವರದಿಯನ್ನು ನೋಡಿ

ಗುರುತಿಸಿದ್ದರಿಂದ ಅದನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ದಿನಾಂಕ 18.06.2024 ರಂದು ಆರೋಪಿಯನ್ನು ಗುರುತಿಸುವ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ. ಈಗ ನಾನು 04 ಪೋಟೊಗಳನ್ನು ನೋಡುತ್ತಿದ್ದು ಅವುಗಳಲ್ಲಿ ಕಾಣುತ್ತಿರುವ ಟ್ರಾಕ್ಟರನ್ನು ಆ ದಿನ ನಾವು ವಶಪಡಿಸಿಕೊಂಡೆವು. ಸದರಿ ಪೋಟೋಗಳನ್ನು ನಿಪಿ-3 ರಿಂದ 6 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ.

ನೆಲೋಗಿಯಿಂದ ಇಟಗಾ ಕಮಾನಕ್ಕೆ ವಾಹನದ ಮೂಲಕ ಹೋಗಲು 40-45 ನಿಮಿಷ ಸಮಯ ಬೇಕಾಗುತ್ತದೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಕತ್ತಲಾಗಿತ್ತು ಎಂದರೆ ಸರಿ. ಕತ್ತಲೆ ಸಮಯದಲ್ಲಿ ನಾನು ವಾಹನವನ್ನು ನೋಡಿಲ್ಲ ಎಂದರೆ ಸಾಕ್ಷಿ ಅಲ್ಲಿ ಲೈಟಿನ ಬೆಳಕು ಇತ್ತು ಎಂದು ಹೇಳುತ್ತಾರೆ. ನಾನು ಟ್ರ್ಯಾಕ್ಟರ ಚೆಸ್ಸಿ ನಂಬರ ಮತ್ತು ಹೆಚ್‌ಪಿ ನಂಬರ ನಮೂದಿಸಿಲ್ಲ ಎಂದರೆ ಸರಿ. ನಾನು ಟ್ರ್ಯಾಕ್ಟರನ್ನು ದೇವಲಗಾಣಗಾಪೂರ ಠಾಣೆ ಆವರಣದಲ್ಲಿ ನಿಲ್ಲಿಸಿದ ಬಗ್ಗೆ ನಾನು ವರದಿಯಲ್ಲಿ ನಮೂದಿಸಿಲ್ಲ. ನಾನು ಟ್ರ್ಯಾಕ್ಟರನ್ನು ದೇವಲಗಾಣಗಾಪೂರ ಠಾಣೆ ಆವರಣದಲ್ಲಿ ನಿಲ್ಲಿಸಿದ ಬಗ್ಗೆ ದೇವಲಗಾಣಗಾಪೂರ ಠಾಣೆಯವರು ನಿಮಗೆ ವರದಿ ನೀಡಿಲ್ಲ ಎಂದರೆ ಸರಿ. ಟ್ರ್ಯಾಕ್ಟರನ್ನು ದೇವಲಗಾಣಗಾಪೂರ ಠಾಣೆ ಆವರಣದಲ್ಲಿ ನಿಲ್ಲಿಸಿದ ಬಗ್ಗೆ ಪೊಟೊಗಳನ್ನು ತೆಗೆದಿಲ್ಲ. ಇಟಗಾ ಕಮಾನ ಹತ್ತಿರ ಟ್ರ್ಯಾಕ್ಟರನ್ನು ನಿಲ್ಲಿಸಿದ ಬಗ್ಗೆ ಪೊಟೊಗಳನ್ನು ತೆಗೆದಿಲ್ಲ. ಇಟಗಾ ಗ್ರಾಮದ ಜನರನ್ನು ನಾನು ಪಂಚರನ್ನಾಗಿ ಮಾಡಿಲ್ಲ ಎಂದರೆ ಸರಿ. ಚಾಸಾ-2 ಮತ್ತು 3 ರವರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿ. ದಿನಾಂಕ 08.03.2024 ರಂದು ಟ್ರ್ಯಾಕ್ಟರನ್ನು ವಶಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ-3 ರಿಂದ 6 ರ ಭಾವಚಿತ್ರಗಳು ಠಾಣೆಯಲ್ಲಿ ತೆಗೆದ ಭಾವಚಿತ್ರಗಳು ಎಂದರೆ ಸರಿ. ಟ್ರ್ಯಾಕ್ಟರನ್ನು ದೇವಲಗಾಣಗಾಪೂರ ಠಾಣೆಯಿಂದ ನಾನು ತಂದಿಲ್ಲ ಎಂದರೆ ಸಾಕ್ಷಿ ತನಿಖಾಧಿಕಾರಿ ತಂದಿರುತ್ತಾರೆ ಎಂದು ಹೇಳುತ್ತಾರೆ.

ಆ ದಿನ ದಾಳಿ ಮಾಡಿದೆವು ಆಗ ಟ್ರ್ಯಾಕ್ಟರ ಚಾಲಕನು ನಮ್ಮನ್ನು ನೋಡಿ ಓಡಿ ಹೋದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ವಾಹನವನ್ನು ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರಕಾರಕ್ಕೆ ಅಂಕಿ ಅಂಶ ಒದಗಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ